ಅನಧಿಕೃತ ಪಂಪ್‌ಸೆಟ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 180 (141)
ಸದಸ್ಯರ ಹೆಸರು : ಶ್ರೀ ಮಹದೇವ ಪ್ರಸಾದ್. ಹೆಚ್.ಎಸ್ (ಗುಂಡ್ಲುಪೇಟೆ)
ಉತ್ತರಿಸುವ ಸಚಿವರು : ಶೋಭಾ ಕರಂದ್ಲಾಜೆ (ಇಂಧನ ಸಚಿವರು)

ಪ್ರಶ್ನೆಗಳು:–

ಅ) ರಾಜ್ಯದಲ್ಲಿ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮೀಕರಣಗೊಳಿಸಲು ನಿರ್ಧರಿಸಲಾಗಿದೆಯೇ? ಹಾಗಿದ್ದಲ್ಲಿ ಒಟ್ಟು ಎಷ್ಟು ಅನಧಿಕೃತ ನೀರಾವರಿ ಪಂಪುಸೆಟ್‌ಗಳನ್ನು ಗುರುತಿಸಲಾಗಿದೆ?

ಆ) ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಅನಧಿಕೃತ ನೀರಾವರಿ ಪಂಪುಸೆಟ್‌ಗಳನ್ನು ಗುರುತಿಸಲಾಗಿದೆ; ತಾಲ್ಲೂಕುವಾರು ಮಾಹಿತಿ ನೀಡುವುದು; ಈವರೆಗೆ ಎಷ್ಟು ಅನಧಿಕೃತ ಪಂಪುಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ? ತಾಲ್ಲೂಕುವಾರು ಮಾಹಿತಿ ನೀಡುವುದು;

ಉತ್ತರಗಳು:–

ಅ) ಹೌದು. ರಾಜ್ಯದಲ್ಲಿರುವ ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮೀಕರಣಗೊಳಿಸಲು ಸರ್ಕಾರದ ಆದೇಶ ಸಂಖ್ಯೆ ಇಎನ್ 09 ಪಿಎಸ್‌ಆರ್ 2011 ದಿನಾಂಕ 11.03.2011 ರಲ್ಲಿ ಕೆಲವು ಷರತ್ತುಗೊಳಪಟ್ಟು ದಿನಾಂಕ 30.09.2011 ರವರೆಗೆ ಅವಕಾಶವನ್ನು ಕಲ್ಪಿಸಲಾಗಿತ್ತು. ನಂತರ ಸರ್ಕಾರದ ಆದೇಶ ಸಂಖ್ಯೆ ಇಎನ್ 09 ಪಿಎಸ್‌ಆರ್ 2009, ದಿನಾಂಕ 23.12.2011 ರಲ್ಲಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮೀಕರಣಗೊಳಿಸಿಕೊಳ್ಳಲು ದಿನಾಂಕ 31.01.2012 ರವರೆಗೆ ಕಾಲಮಿತಿಯನ್ನು ವಿಸ್ತರಿಸಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ವಿದ್ಯುತ್ ಸರಬರಾಜು ಕಂಪನಿಗಳು ಅಂದಾಜಿಸಿರುವಂತೆ ರಾಜ್ಯದಲ್ಲಿ ಒಟ್ಟು 1,80,135 ಅನಧಿಕೃತ ನೀರಾವರಿ ಪಂಪುಸೆಟ್ಟುಗಳು

ಇರುವುದು ಕಂಡು ಬಂದಿರುತ್ತದೆ.

ಆ) ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 9572 ಸಂಖ್ಯೆಯ ಅನಧಿಕೃತ ನೀರಾವರಿ ಪಂಪುಸೆಟ್ಟುಗಳಿರುವುದು ಕಂಡು ಬಂದಿರುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿರುವ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಹಾಗೂ ಸಕ್ರಮಗೊಳಿಸಲಾದ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ತಾಲ್ಲೂಕು	ಗುರುತಿಸಲಾದ ಅನಧಿಕೃತ ಪಂಪುಸೆಟ್ಟುಗಳ ಸಂಖ್ಯೆ	ಸಕ್ರಮಗೊಳಿಸಲಾದ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ
1.	ಚಾಮರಾಜನಗರ	2227	668
2.	ಗುಂಡ್ಲುಪೇಟೆ	4100	1039
3.	ಕೊಳ್ಳೇಗಾಲ	3135	576
4.	ಯಳಂದೂರು	110	10
	ಒಟ್ಟು	**9572**	**2293**

ಬಸ್‌ಗಳ ವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 181 (311)

ಸದಸ್ಯರ ಹೆಸರು : ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು)

ಉತ್ತರಿಸುವ ಸಚಿವರು : ಶ್ರೀ ಆರ್. ಅಶೋಕ್ (ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು)

ಪ್ರಶ್ನೆಗಳು:–

ಅ) ಬೆಳಗಾವಿ ಜಿಲ್ಲೆಯಲ್ಲಿ ಅನರ್ಹಗೊಂಡ ಬಸ್‌ಗಳ ಸಂಖ್ಯೆ ಎಷ್ಟು? (ಘಟಕವಾರು ವಿವರ ನೀಡುವುದು)

ಆ) ಬೈಲಹೊಂಗಲ ಡಿಪೋದಲ್ಲಿ ಹಳೆಯ ಹಾಗೂ ಅನರ್ಹಗೊಂಡ ಬಸ್ಸುಗಳೇ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?